

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್(ಅ)ರ ವಿನಯ ಮತ್ತು ನಮ್ರತೆಯ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–06–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಆಜ್ಞೆ ಮತ್ತು ಹಝ್ರತ್ ಪೈಗಂಬರ್(ಸ)ರ ಮಾದರಿಯನ್ನು ಅನುಸರಿಸುತ್ತಾ, ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ನಮಗೆ ಬಡವರ ಪೋಷಣೆ, ಔದಾರ್ಯ ಮತ್ತು ದಾನಶೀಲತೆಯ ಅನೇಕ ಘಟನೆಗಳು ಕಾಣುತ್ತವೆ. ಅವರ ಪ್ರವಾದಿತ್ವದ ವಾದದ ನಂತರ ಮಾತ್ರವಲ್ಲ, ಅವರ ಜೀವನದ ಆರಂಭಿಕ ದಿನಗಳು ಮತ್ತು ಯೌವನದಲ್ಲೂ ಅವರ ಉನ್ನತ ನೈತಿಕತೆಯ ಘಟನೆಗಳನ್ನು ನಾವು ಕಾಣುತ್ತೇವೆ.

ಅಲ್ಲಾಹನು ಯಾವ ತಾಯಿಯ ಮಡಿಲಲ್ಲಿ ಅವರ ಪೋಷಣೆಯನ್ನು ಮಾಡಿದನೋ, ಆ ತಾಯಿಯ ಜೀವನವನ್ನು ನೋಡಿದರೂ ಅಲ್ಲಿಯೂ ನಮಗೆ ಬಡವರ ಪೋಷಣೆ, ಔದಾರ್ಯ ಮತ್ತು ದಾನಶೀಲತೆಯ ಘಟನೆಗಳು ಸಿಗುತ್ತವೆ. ಅಂದರೆ, ಅವರು ಉನ್ನತ ನೈತಿಕತೆಯನ್ನು ಕಲಿಸಿದಂತಹ ತಾಯಿಯ ಮಡಿಲಲ್ಲಿ ಬೆಳೆದರು. ಹಝ್ರತ್ ಶೇಖ್ ಯಅ್‌ಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ತಾಯಿ ಹಝ್ರತ್ ಚಿರಾಗ್ ಬೀವಿ ಸಾಹಿಬರ ಕುಟುಂಬವು ಹೋಶಿಯಾರ್‌ಪುರ ಜಿಲ್ಲೆಯ 'ಆಯಿಮಾ' ಗ್ರಾಮದ ಗೌರವಾನ್ವಿತ ಮತ್ತು ನೈಜ ಮೊಘಲ್ ಕುಟುಂಬವಾಗಿತ್ತು. ಅವರ ಸ್ವಭಾವದಲ್ಲಿ ಔದಾರ್ಯ, ದಾನಶೀಲತೆ ಮತ್ತು ಅತಿಥಿ ಸತ್ಕಾರವು ತುಂಬಿ ತುಳುಕುತ್ತಿತ್ತು. ಓರ್ವ ಪವಿತ್ರ ಮತ್ತು ಪರಿಶುದ್ಧ ಮಹಿಳೆಯಲ್ಲಿ ಇರಬೇಕಾದ ಎಲ್ಲ ಉನ್ನತ ಗುಣಗಳು ಅವರಲ್ಲಿದ್ದವು. ಅವರು ಯಾವಾಗಲೂ ಹಸನ್ಮುಖಿ ಮತ್ತು ಧೈರ್ಯದಿಂದ ಇರುತ್ತಿದ್ದರು. ಅತಿಥಿ ಸತ್ಕಾರಕ್ಕಾಗಿ ಅವರ ಹೃದಯದಲ್ಲಿ ಅಪಾರ ಆವೇಶ ಮತ್ತು ಉತ್ಸಾಹ ಇತ್ತು. ನಾಲ್ಕು ಜನರಿಗೆ ಊಟ ಕಳುಹಿಸಬೇಕೆಂಬ ಮಾಹಿತಿ ಅವರಿಗೆ ಸಿಕ್ಕರೆ, ಊಟ ಕಳುಹಿಸುವಾಗ ಅದು ಎಂಟು ಜನರಿಗಿಂತಲೂ ಹೆಚ್ಚಿನವರಿಗಾಗಿ ಇರುತ್ತಿತ್ತು. ತಮ್ಮ ಊರಿನ ಬಡವರು ಮತ್ತು ದುರ್ಬಲರ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು. ಅವರ ಸಾಮಾನ್ಯ ಕಾರ್ಯಗಳಲ್ಲಿ ಇರುವ ಒಂದು ವಿಶೇಷತೆಯೆಂದರೆ, ಬಡವರು ಮರಣಹೊಂದುವಾಗ ಅವರಿಗೆ ಬೇಕಾಗುವ ಕಫನ್ ಬಟ್ಟೆ ತಾಯಿಯ ಮನೆಯಿಂದಲೇ ಕೊಡಲಾಗುತ್ತಿತ್ತು.

ಹಝ್ರತ್ ಮಿಯಾನ್ ಅಲ್ಲಾಹ್ ಯಾರ್ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್ಕೋಟ್‌ನಲ್ಲಿ ಉದ್ಯೋಗದಲ್ಲಿದ್ದಾಗ, ಒಮ್ಮೆ ಅವರ ತಾಯಿ ಅವರಿಗಾಗಿ ಎರಡು ಜೊತೆ ಉಡುಪುಗಳು ಮತ್ತು ಸ್ವಲ್ಪ ಸಿಹಿ ತಿನಿಸುಗಳನ್ನು ಮಂಗಲ್ ಹಜಾಮ್ ಎಂಬ ವ್ಯಕ್ತಿಯ ಕೈಯಲ್ಲಿ ಕಳುಹಿಸಿಕೊಟ್ಟರು. ಆತ ಹೇಳುತ್ತಾನೆ: ನಾನು ಈ ವಸ್ತುಗಳನ್ನು ತೆಗೆದುಕೊಂಡು ಸಿಯಾಲ್ಕೋಟ್‌ಗೆ ಹೋಗಿ ಹಝ್ರತ್ ಮಸೀಹ್ ಮೌಊದ್(ಅ)ರ ಮುಂದಿಟ್ಟಾಗ, ಅವರು ಹೇಳಿದರು: 'ನಿನ್ನ ಪಾಲಿಗೆ ಇರುವುದನ್ನು ನೀನು ತೆಗೆದುಕೋ ಮತ್ತು ನನ್ನ ಪಾಲನ್ನು ನನಗೆ ಕೊಡು.' ನಾನು ಹೇಳಿದೆ: 'ಹುಝೂರ್, ಇವು ನಿಮಗಾಗಿವೆ. ತಾಯಿಯವರು ನಿಮಗಾಗಿ ಕಳುಹಿಸಿದ್ದಾರೆ.' ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ನೀನು ಇಷ್ಟೆಲ್ಲ ವಸ್ತುಗಳನ್ನು ಇಷ್ಟು ದೂರ ಹೊತ್ತು ತಂದಿದ್ದೀಯಾ, ಆದ್ದರಿಂದ ನಿನ್ನ ಅರ್ಧ ಪಾಲನ್ನು ಖಂಡಿತವಾಗಿಯೂ ತೆಗೆದುಕೋ' ಎಂದು ಹೇಳಿ ನನಗೆ ಒಂದು ಜೊತೆ ಉಡುಪು ಮತ್ತು ಸ್ವಲ್ಪ ಸಿಹಿತಿನಿಸುಗಳನ್ನು ನೀಡಿದರು ಮತ್ತು ಹೀಗೆ ಹೇಳಿದರು: 'ನನ್ನನ್ನು ಇಲ್ಲಿಂದ ಬೇಗನೆ ವಾಪಸ್ ಕರೆಸಿಕೊಳ್ಳಿ, ನನಗೆ ಇಲ್ಲಿ ಮನಸ್ಸಿಲ್ಲ' ಎಂದು ತಾಯಿಗೆ ಹೋಗಿ ಹೇಳು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಒಂದು ವರದಿಯನ್ನು ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್ಕೋಟ್‌ನಲ್ಲಿದ್ದಾಗ ಮನೆಯಲ್ಲಿ ಯಾರನ್ನೂ ಭೇಟಿಯಾಗುತ್ತಿರಲಿಲ್ಲ. ಅವರಿಗೆ ಸಿಗುತ್ತಿದ್ದ ವೇತನವನ್ನು ಅಗತ್ಯವುಳ್ಳವರಿಗೆ ಹಂಚಿಬಿಡುತ್ತಿದ್ದರು, ಬಟ್ಟೆಗಳನ್ನು ಹೊಲಿಸಿ ಕೊಡುತ್ತಿದ್ದರು ಅಥವಾ ನಗದು ನೀಡುತ್ತಿದ್ದರು. ತಮಗಾಗಿ ಊಟದ ಖರ್ಚನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದರು.

ಆರಂಭಿಕ ದಿನಗಳಲ್ಲಿ ಹಝ್ರ‌ತ್ ಮಸೀಹ್ ಮೌಊದ್(ಅ) ಏಕಾಂತವಾಸಿಯಾಗಿ ಇರುತ್ತಿದ್ದರಿಂದ ಮತ್ತು ಅದೇ ಅವರ ಒಲವಾಗಿದ್ದರಿಂದ, ಈ ರೀತಿಯ ಸ್ವಭಾವಗುಣಗಳು ಬಹಳ ಗುಪ್ತವಾಗಿತ್ತು. ಆದರೆ ಅಲ್ಲಾಹನು ಅವರನ್ನು ಸಾರ್ವಜನಿಕವಾಗಿ ಹೊರತಂದಾಗ ಮತ್ತು ಜನರ ಆಗಮನವು ಹೆಚ್ಚಾದಾಗ ಹಾಗೂ ಅವರ ಪರಿಸ್ಥಿತಿಗಳು ಜನರಿಗೆ ತಿಳಿದಾಗ, ಈ ಘಟನೆಗಳನ್ನು ನೋಡುವವರು ಮತ್ತು ವಿವರಿಸುವವರು ಉಂಟಾದರು. ಹಝ್ರ‌ತ್ ಮಸೀಹ್ ಮೌಊದ್(ಅ) ಯಾಚಕರನ್ನು ಎಂದಿಗೂ ಬರಿಗೈಯಲ್ಲಿ ಮರಳಿ ಕಳುಹಿಸುತ್ತಿರಲಿಲ್ಲ.

ಹಝ್ರ‌ತ್ ಮೌಲಾನಾ ಅಬ್ದುಲ್ ಕರೀಮ್ ಸಾಹಿಬ್(ರ) ವಿವರಿಸುತ್ತಾರೆ: ಒಂದು ದಿನ ಏನಾಯಿತೆಂದರೆ, ಅಸರ್ ನಮಾಝಿನ ನಂತರ ಹಝ್ರ‌ತ್ ಮಸೀಹ್ ಮೌಊದ್(ಅ) ಎದ್ದು ಮಸೀದಿಯಿಂದ ಹೊರಗೆ ಹೋಗಲು ಕಾಲಿಟ್ಟರು. ಅಷ್ಟರಲ್ಲಿ 'ನಾನು ಯಾಚಕನಾಗಿದ್ದೇನೆ' ಎಂದು ಒಬ್ಬ ಯಾಚಕನು ಮೆಲ್ಲನೆ ಹೇಳಿದನು. ಹಝ್ರ‌ತ್ ಮಸೀಹ್ ಮೌಊದ್(ಅ)ರಿಗೆ ಆ ಸಮಯದಲ್ಲಿ ಯಾವುದೋ ತುರ್ತು ಕೆಲಸವಿತ್ತು ಮತ್ತು ಆತನ ಧ್ವನಿಯು ಇತರ ಜನರ ಧ್ವನಿಗಳೊಂದಿಗೆ ಬೆರೆತುಹೋಗಿತ್ತು. ಹಝ್ರ‌ತ್ ಮಸೀಹ್ ಮೌಊದ್(ಅ) ಮನೆ ಒಳಗೆ ಹೋದಾಗ ಅದೇ ಮೆಲು ಧ್ವನಿಯು ಅವರ ಹೃದಯದ ಮೇಲೆ ತೀವ್ರ ಪ್ರಭಾವ ಬೀರಿತು. ಹಝ್ರ‌ತ್ ಮಸೀಹ್ ಮೌಊದ್(ಅ) ಹಝ್ರ‌ತ್ ನೂರುದ್ದೀನ್ ಸಾಹಿಬ್(ರ)ರನ್ನು ಕರೆದು ಹೀಗೆ ಹೇಳಿದರು: 'ಒಬ್ಬ ಯಾಚಕನಿದ್ದನು, ಅವನು ಎಲ್ಲಿಗೆ ಹೋದನು ಎಂದು ನೋಡಿರಿ'. ಆದರೆ ಆತನಿಗಾಗಿ ಹುಡುಕಲಾದರೂ ಆತನನ್ನು ಕಂಡು ಹಿಡಿಯಲಾಗಲಿಲ್ಲ. ಮಗ್ರಿಬ್ ನಮಾಝಿನ ನಂತರ ಹಝ್ರ‌ತ್ ಮಸೀಹ್ ಮೌಊದ್(ಅ) ಪುನಃ ಕುಳಿತಾಗ, ಅದೇ ಯಾಚಕನು ಪುನಃ ಬಂದು ಬೇಡಿದನು. ಹಝ್ರ‌ತ್ ಮಸೀಹ್ ಮೌಊದ್(ಅ) ಬಹಳ ವೇಗವಾಗಿ ಜೇಬಿನಿಂದ ಏನನ್ನೋ ತೆಗೆದು ಅವನ ಕೈಯಲ್ಲಿಟ್ಟರು. ಈಗ ಅವರು ಎಷ್ಟೊಂದು ಸಂತೋಷಪಟ್ಟರೆಂದರೆ, ಅವರ ಮೇಲಿದ್ದ ಯಾವುದೋ ದೊಡ್ಡ ಹೊರೆಯೊಂದು ಇಳಿದುಹೋದಂತೆ ಭಾಸವಾಗುತ್ತಿತು.

ಖಾದಿಯಾನಿನಿಂದ ಆರು ಮೈಲಿ ದೂರದಲ್ಲಿ ಸಠಿಯಾಲಿ ಎಂಬ ಒಂದು ಸಣ್ಣ ಗ್ರಾಮವಿದೆ. ಅಲ್ಲಿಂದ ಒಬ್ಬ ಜಟ್ ಫಕೀರನು ಬರುತ್ತಿದ್ದನು. ಅವನು ಮಸ್ಜಿದ್ ಮುಬಾರಕ್‌ನ ಛಾವಣಿಯ ಕೆಳಗೆ ಬಂದು ಕಿಟಕಿಯ ಬಳಿ 'ಗುಲಾಮ್ ಅಹ್ಮದ್, ಒಂದು ರೂಪಾಯಿ ಬೇಕು' ಎಂದು ಕೂಗುತ್ತಿದ್ದನು ಮತ್ತು ಅಲ್ಲಿಯೇ ಕುಳಿತುಕೊಳ್ಳುತ್ತಿದ್ದನು. ಹಝ್ರ‌ತ್ ಮಸೀಹ್ ಮೌಊದ್(ಅ) ಕಾರ್ಯನಿರತರಾಗಿದ್ದರೆ, ಅವನು ಪದೇ ಪದೇ ಕೂಗುತ್ತಿದ್ದನು. ಇದು ಬಹಳ ಜನರಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಯಾರಾದರೂ ಅವನಿಗೆ ಏನಾದರೂ ಹೇಳಿದ್ದಾರೆ ಎಂದು ಹಝ್ರ‌ತ್ ಮಸೀಹ್ ಮೌಊದ್(ಅ)ರಿಗೆ ತಿಳಿದರೆ, ಅವರು ಅದನ್ನು ಇಷ್ಟಪಡುತ್ತಿರಲಿಲ್ಲ ಮತ್ತು ನಗುತ್ತಲೇ ಅವನಿಗೆ ರೂಪಾಯಿ ಕೊಟ್ಟುಬಿಡುತ್ತಿದ್ದರು.

1905ರಲ್ಲಿ ಹಝ್ರ‌ತ್ ಮಸೀಹ್ ಮೌಊದ್(ಅ) ಕೊನೆಯ ಬಾರಿಗೆ ದೆಹಲಿಗೆ ತೆರಳಿದರು. ಒಂದು ದಿನ ಅವರು ದೆಹಲಿಯ ದರ್ಗಾಗಳು ಇತ್ಯಾದಿಗಳಿಗೆ ಭೇಟಿ ನೀಡುವ ಉದ್ದೇಶದಿಂದ ಹೊರಟರು. ಒಬ್ಬರು ಹೇಳಿದರು: 'ಹುಝೂರ್, ಆ ದಾರಿಯಲ್ಲಿ ಎಷ್ಟೊಂದು ಭಿಕ್ಷುಕರಿದ್ದಾರೆಂದರೆ, ಅಲ್ಲಿಂದ ಹಾದುಹೋಗುವುದೇ ಕಷ್ಟ.' ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳಿದರು: 'ಇಂದು ನಾವು ಹೋಗೋಣ. ನಾವು ಎಲ್ಲರಿಗೂ ಕೊಡುತ್ತೇವೆ.' ಆ ದಿನ ಅಷ್ಟೇನೂ ಭಿಕ್ಷುಕರು ಇರಲಿಲ್ಲವಾದರೂ, ಕೆಲವರು ಸಿಕ್ಕರು ಮತ್ತು ಪ್ರತಿಯೊಬ್ಬರಿಗೂ ಭಿಕ್ಷೆ ಕೊಡಲಾಯಿತು.

ಹಝ್ರ‌ತ್ ಹಾಫಿಝ್ ಅಹ್ಮದ್ ಅಲ್ಲಾಹ್ ನಾಗ್‌ಪುರಿ ಸಾಹಿಬ್(ರ) ಹೇಳುತ್ತಾರೆ: ಒಂದು ದಿನ ಹಝ್ರ‌ತ್ ಮಸೀಹ್ ಮೌಊದ್(ಅ) ಗೋಲ್ ಕಮ್ರ ಎಂಬ ಹೆಸರಿನ ಕೋಣೆಯಲ್ಲಿ ಕುಳಿತಿದ್ದರು. ಸುಮಾರು 20 ಅಥವಾ 25 ಜನರು ಅಲ್ಲಿದ್ದರು. ಹಝ್ರ‌ತ್ ಮಸೀಹ್ ಮೌಊದ್(ಅ) ಭಾಷಣ ಮಾಡುತ್ತಿದ್ದಾಗ ಒಬ್ಬ ಫಕೀರನು ಬಂದು ಜೋರಾಗಿ ಭಿಕ್ಷೆ ಬೇಡಿದನು. ಈತ ಹಝ್ರ‌ತ್ ಮಸೀಹ್ ಮೌಊದ್(ಅ)ರ ಧ್ವನಿಗೆ ಭಂಗ ತರುತ್ತಿದ್ದಾನಲ್ಲ ಎಂದು ಹೇಳಿ ನನಗೆ ಬಹಳ ಕೋಪಬಂತು ಮತ್ತು ನಾನು ಬಾಗಿಲನ್ನು ಮುಚ್ಚಿದೆ. ಹಝ್ರ‌ತ್ ಮಸೀಹ್ ಮೌಊದ್(ಅ) ಭಾಷಣವನ್ನು ನಿಲ್ಲಿಸಿ ನನ್ನೊಡನೆ ಹೇಳಿದರು: 'ಒಳಗೆ ಬಾಗಿಲನ್ನು ತಟ್ಟಿ ಆ ಯಾಚಕನಿಗೆ ಒಳಗಿನಿಂದ ಏನಾದರೂ ತಂದು ಕೊಡಿರಿ, ಯಾಚಕನು ಬೇಡುವಾಗ ಬಾಗಿಲು ಮುಚ್ಚುವುದು ಒಳ್ಳೆಯದಲ್ಲ.'

ಶೇಖ್ ಯಅ್‌ಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ: ನಾನು 1892ರಿಂದ ಖಾದಿಯಾನಿಗೆ ಬರುತ್ತಿದ್ದೆ ಮತ್ತು 1898ರಿಂದ ಸ್ಥಿರವಾಗಿ ಹಝ್ರ‌ತ್ ಮಸೀಹ್ ಮೌಊದ್(ಅ)ರ ಸೇವೆಯಲ್ಲೇ ಇದ್ದೆ. ನಾನು ಇರುವಾಗಲೂ ಅನೇಕರು ಭಿಕ್ಷೆ ಬೇಡುತ್ತಿದ್ದರು. ಹಝ್ರ‌ತ್ ಮಸೀಹ್ ಮೌಊದ್(ಅ) ಯಾಚಕನಿಗೆ ತಾಮ್ರದ ನಾಣ್ಯ ಅಂದರೆ ಪೈಸೆ ನೀಡುವುದನ್ನು ನಾನು ಎಂದಿಗೂ ನೋಡಿಲ್ಲ. ಅವರು ಯಾವಾಗಲೂ ಬೆಳ್ಳಿಯ ನಾಣ್ಯವನ್ನೇ ನೀಡುತ್ತಿದ್ದರು, ಅಂದರೆ ಹೆಚ್ಚಿನ ಹಣವನ್ನೇ ನೀಡುತ್ತಿದ್ದರು.

ಒಮ್ಮೆ ಒಬ್ಬ ಫಕೀರನು ಹಝ್ರ‌ತ್ ಮಸೀಹ್ ಮೌಊದ್(ಅ)ರ ಬಳಿ ಏಕಾಂತದಲ್ಲಿ ಬಂದು ಹೀಗೆ ಹೇಳಿದನು: 'ನಾನು ಕಾಡಿನಲ್ಲಿ ಒಂದು ಬಾವಿ ತೋಡಿಸಲು ಬಯಸುತ್ತೇನೆ. ಅಲ್ಲಿ ಪ್ರಯಾಣಿಕರಿಗೆ ವಿಶ್ರಾಂತಿ ಸಿಗುವುದು ಮತ್ತು ಅವರು ಅಲ್ಲಿಂದ ನೀರು ಕುಡಿಯುವರು.' ಹಝ್ರ‌ತ್ ಮಸೀಹ್ ಮೌಊದ್(ಅ) ಈ ಉದ್ದೇಶಕ್ಕಾಗಿ ಅವನಿಗೆ 200 ರೂಪಾಯಿಗಳನ್ನು

ನೀಡಿದರು ಮತ್ತು ಹೀಗೆ ಹೇಳಿದರು: 'ನೀನು ಜನರ ಸೇವೆಗಾಗಿ ಈ ಕೆಲಸ ಮಾಡುತ್ತಿರುವೆ, ನಾನು ಹಣ ನೀಡುತ್ತೇನೆ.' ಹೀಗೆ ಅವರು ಜನರ ಸೇವೆ ಮಾಡಲು ಉಪದೇಶ ನೀಡುತ್ತಿದ್ದರು ಎಂದು ಮಾತ್ರವಲ್ಲ, ಪ್ರಾಯೋಗಿಕ ಮಾದರಿಯನ್ನು ಕೂಡ ತೋರಿಸಿಕೊಟ್ಟರು.

ಹಝ್ರ್‌ರತ್ ಅಬ್ದುಸ್ಸಮೀಅ್ ಸಾಹಿಬ್(ರ) ವಿವರಿಸುತ್ತಾರೆ: ಮಿಯಾನ್ ಶರೀಫ್ ಅಹ್ಮದ್ ಸಾಹಿಬ್(ರ)ರ ಅಖೀಖಾ ಕಾರ್ಯಕ್ರಮವಿತ್ತು. ಅತಿಥಿಗೃಹದಲ್ಲಿ ಎಲ್ಲ ಅತಿಥಿಗಳು ಊಟ ಮಾಡುತ್ತಿದ್ದಾಗ, ಒಬ್ಬ ಫಕೀರನು ಅತಿಥಿಗೃಹದ ಒಳಗೆ ಭಿಕ್ಷೆ ಬೇಡಲು ಬಂದನು. ಜನರು ಅವನನ್ನು ಹೊರಗೆ ಹಾಕಲು ಮುಂದಾದಾಗ, ಹಝ್ರ್‌ರತ್ ಮಸೀಹ್ ಮೌಊದ್(ಅ) ಸ್ವತಃ ಆ ಫಕೀರನಿಗೆ ಊಟ ನೀಡಿದರು ಮತ್ತು ಆತನನ್ನು ಗದರಿಸದಂತೆ ಜನರನ್ನು ತಡೆದರು ಮತ್ತು ಹೀಗೆ ಹೇಳಿದರು: 'ಅವನು ಊಟ ಮಾಡಲು ಬಂದಿದ್ದಾನೆ, ಗದರಿಸುವುದು ಸರಿಯಲ್ಲ.'

ಹಝ್ರ್‌ರತ್ ಮುನ್‌ಶಿ ಝಫರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಒಮ್ಮೆ ಒಬ್ಬ ಮೌಲ್ವಿ ಖಾದಿಯಾನಿಗೆ ಬಂದು ಹಝ್ರ್‌ರತ್ ಮಸೀಹ್ ಮೌಊದ್(ಅ)ರೊಂದಿಗೆ ಸಂವಾದ ಪ್ರಾರಂಭಿಸಿದನು. ಈಸಾ(ಅ)ರ ಜೀವನ ಮತ್ತು ಮರಣದ ಕುರಿತ ಸಂವಾದವಾಗಿತ್ತು. ಹಝ್ರ್‌ರತ್ ಮಸೀಹ್ ಮೌಊದ್(ಅ) ಅವನಿಗೆ ಉತ್ತರ ನೀಡಲು ತೊಡಗಿದಾಗ ಅವನು ಮೌನವಾದನು. ಅವನಿಗೆ ವಿವರಿಸಿ ಕೊಟ್ಟ ನಂತರ 'ಅರ್ಥವಾಯಿತೇ?' ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಅವನೊಡನೆ ಕೇಳಿದಾಗ, ಅವನು ಅತ್ಯಂತ ದುರಹಂಕಾರದಿಂದ ಹೀಗೆ ಹೇಳಿದನು: 'ನೀವು ದಜ್ಜಾಲ್ ಎಂದು ನನಗೆ ಅರ್ಥವಾಯಿತು. (ನಊಧುಬಿಲ್ಲಾಹ್) ಏಕೆಂದರೆ ಚರ್ಚೆಯಲ್ಲಿ ಇತರರನ್ನು ನಿರುತ್ತರಗೊಳಿಸುವುದು ದಜ್ಜಾಲ್‌ನ ಗುಣವಾಗಿದೆ.' ಅನಂತರ ಹಝ್ರ್‌ರತ್ ಮಸೀಹ್ ಮೌಊದ್(ಅ) ಅವನೊಡನೆ ಏನೂ ಹೇಳಲಿಲ್ಲ. ಅವನು ಹೊರಟುಹೋದನು. ಅಮೃತಸರಕ್ಕೆ ಹೋಗಿ ಅವನು ಒಂದು ಕರಪತ್ರವನ್ನು ಪ್ರಕಟಿಸಿದನು ಮತ್ತು ಈ ಘಟನೆಯನ್ನು ವಿವರಿಸುತ್ತಾ ಹೀಗೆ ಬರೆದನು: ಅವರು ಒಳಗೆ ಹೋದಾಗ, ನಾನು ಹೀಗೊಂದು ಚೀಟಿ ಕಳುಹಿಸಿದೆ: 'ನಾನು ನಿರ್ಗತಿಕ ಮತ್ತು ನನಗೆ ಸ್ವಲ್ಪ ಉಪಕಾರ ಮಾಡಿ.' ಅವರು ತಕ್ಷಣ 15 ರೂಪಾಯಿಗಳನ್ನು ಕಳುಹಿಸಿದರು. ಒಟ್ಟಿನಲ್ಲಿ ಅವರು ಬಹಳ ದಾನಶೀಲರಾಗಿದ್ದಾರೆ.'

ಹಝ್ರ್‌ರತ್ ಖಾಝಿ ಅಬ್ದುಲ್ ಗಫೂರ್ ಸಾಹಿಬ್(ರ) ವಿವರಿಸುತ್ತಾರೆ: 1906ರಲ್ಲಿ ನಾನು ನನ್ನ ಅಣ್ಣನೊಂದಿಗೆ ರಾವಲ್ಪಿಂಡಿಯಿಂದ ಖಾದಿಯಾನಿಗೆ ಹೋದೆ. ಹಝ್ರ್‌ರತ್ ಮಸೀಹ್ ಮೌಊದ್(ಅ) ಮಸೀದಿಯ ಮೆಟ್ಟಿಲುಗಳನ್ನು ಇಳಿಯುತ್ತಿದ್ದರು. ಹಕೀಮ್ ಶಾಹ್ ನವಾಝ್ ಎಂಬ ವ್ಯಕ್ತಿಯೊಬ್ಬರು ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ಒಂದು ಚೀಲದಲ್ಲಿ 17 ಪೌಂಡ್‌ಗಳನ್ನು ಕಾಣಿಕೆಯಾಗಿ ನೀಡಿದರು. ಹಝ್ರ್‌ರತ್ ಮಸೀಹ್ ಮೌಊದ್(ಅ) ಆ ಚೀಲವನ್ನು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಂಡರು. ಕೆಳಗೆ ಒಬ್ಬ ಯಾಚಕ ನಿಂತು ಬೇಡುತ್ತಿದ್ದನು. ಹಝ್ರ್‌ರತ್ ಮಸೀಹ್ ಮೌಊದ್(ಅ) ಅದೇ ಚೀಲವನ್ನು ಜೇಬಿನಿಂದ ತೆಗೆದು ಅವನ ಕೈಯಲ್ಲಿಟ್ಟರು. ಹಕೀಮ್ ಸಾಹಿಬ್ ಹೇಳಿದರು: 'ಹುಝೂರ್! ಅದರಲ್ಲಿ 17 ಪೌಂಡ್‌ಗಳಿದ್ದವು.' ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದು ಅವನದ್ದೇ ಆಗಿತ್ತು, ಅವನಿಗೇ ತಲುಪಿದೆ.' ಆ ಕಾಲದಲ್ಲಿ ಅದು ಬಹಳ ದೊಡ್ಡ ಮೊತ್ತವಾಗಿತ್ತು.

ಹಝ್ರ್‌ರತ್ ಅಮ್ಮಾಜಾನ್(ರ)ರಿಂದ ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವರದಿ ಮಾಡಿದ್ದಾರೆ. ಅವರು ಬರೆಯುತ್ತಾರೆ: ತಾಯಿ ನನ್ನೊಡನೆ ಹೀಗೆ ವಿವರಿಸಿದರು, ಹಝ್ರ್‌ರತ್ ಮಸೀಹ್ ಮೌಊದ್(ಅ) ಬಹಳ ದಾನ ಮಾಡುತ್ತಿದ್ದರು. ಅದನ್ನು ಸಾಮಾನ್ಯವಾಗಿ ನಮಗೂ ತಿಳಿಯದ ರೀತಿಯಲ್ಲಿ ರಹಸ್ಯವಾಗಿ ನೀಡುತ್ತಿದ್ದರು. 'ಎಷ್ಟು ದಾನ ಮಾಡುತ್ತಿದ್ದರು?' ಎಂದು ನಾನು ಕೇಳಿದಾಗ, ತಾಯಿ ಹೇಳಿದರು: 'ಬಹಳಷ್ಟು ನೀಡುತ್ತಿದ್ದರು ಮತ್ತು ಕೊನೆಯ ದಿನಗಳಲ್ಲಿ ಎಷ್ಟು ಹಣ ಬರುತ್ತಿತ್ತೋ, ಅದರ ಹತ್ತನೇ ಒಂದು ಭಾಗವನ್ನು ದಾನಕ್ಕಾಗಿ ಪ್ರತ್ಯೇಕಿಸಿಡುತ್ತಿದ್ದರು.'

ಇದರರ್ಥ ಹತ್ತನೇ ಒಂದು ಭಾಗಕ್ಕಿಂತ ಹೆಚ್ಚು ನೀಡುತ್ತಿರಲಿಲ್ಲ ಎಂದಲ್ಲ, ಬದಲಾಗಿ ಕೆಲವೊಮ್ಮೆ ಖರ್ಚುಗಳು ಅಗತ್ಯಕ್ಕಿಂತ ಹೆಚ್ಚಾಗುತ್ತಿದ್ದವು, ದಾನದಲ್ಲಿ ಯಾವುದೇ ಕೊರತೆಯಾಗದಿರಲು ಹಾಗೂ ಆ ಹಣ ಬೇರೆ ಯಾವುದೇ ಖರ್ಚಿಗೆ ಬಳಕೆಯಾಗದಿರಲಿಕ್ಕಾಗಿ ಕನಿಷ್ಠ ಹತ್ತನೇ ಒಂದು ಭಾಗವನ್ನು ಮೊದಲೇ ಪ್ರತ್ಯೇಕಿಸಿಡುತ್ತಿದ್ದರು. ದಾನ ನೀಡುವಾಗ ಅಹ್ಮದಿ–ಅಹ್ಮದಿಯೇತರ ಎಂಬ ಭೇದಭಾವ ಮಾಡುತ್ತಿರಲಿಲ್ಲ. ಯಾಚಕನನ್ನು ಎಂದಿಗೂ ಬರಿಗೈಲಿ ಮರಳಿಸದೇ ಇರುವುದು ಅವರ ಅಭ್ಯಾಸವಾಗಿತ್ತು. ಜನರು ನಿಜವಾಗಿಯೂ ಏನನ್ನು ಬೇಡುತ್ತಿದ್ದಾರೆ ಎಂಬುದನ್ನು ಅವರು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರು.

ಒಮ್ಮೆ ಒಬ್ಬ ವ್ಯಕ್ತಿಯು ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ಒಂದು ಸುಂದರವಾದ ಟೋಪಿಯನ್ನು ಕಳುಹಿಸಿದನು. ಆ ಪಾರ್ಸೆಲ್ ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ತಲುಪಿದಾಗ ಒಬ್ಬ ಹಿಂದೂ ಕೂಡ ಅಲ್ಲಿದ್ದರು. ಅವರು ಪಾರ್ಸೆಲ್ ಬಿಚ್ಚಿದಾಗ ಅದು ಟೋಪಿ ಆಗಿತ್ತು ಎಂದು ಗೊತ್ತಾಯಿತು. ಆ ಹಿಂದೂ ಅದನ್ನು ಬಹಳ ಹೊಗಳಿದರು. ಆಗ ಹಝ್ರ್‌ರತ್ ಮಸೀಹ್ ಮೌಊದ್(ಅ) ಆ ಟೋಪಿಯನ್ನು ಅವರಿಗೇ ಕೊಟ್ಟರು.

ಸರ್‌ಫರಾಝ್ ಖಾನ್ ಎಂಬ ಅಹ್ಮದಿಯೊಬ್ಬರು ವಿವರಿಸುತ್ತಾರೆ: ನಾವು ಜಲ್ಸಗೆ ಬಂದಿದ್ದೆವು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಯಾರೋ ಒಂದು ಕುದುರೆಯನ್ನು ನೀಡಿದ್ದರು. ಆ ಕುದುರೆ ನನಗೆ ಸಿಕ್ಕರೆ, ನಾನು ಅದನ್ನು ತೆಗೆದುಕೊಂಡು ಹೋಗಿ 'ಇದು ಮಸೀಹ್‌ರ ಕುದುರೆ' ಎಂದು ಹೇಳುತ್ತೇನೆ' ಎಂದು ನಾನು ಯೋಚಿಸಿದೆ. 'ನಾನು ಮರಳಿ ಹೋಗಲು ಬಯಸುತ್ತೇನೆ' ಎಂದು ಜಲ್ಸದ ನಂತರ ನಾನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೇಳಿದೆ. ಅಲ್ಲೇ ತಂಗಲು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಕೆಲವು ದಿನಗಳ ನಂತರ ನಾನು ಪುನಃ ಹಾಗೆಯೇ ಹೇಳಿದಾಗ, ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಚೌಧರಿ ಸಾಹಿಬ್, ಈ ಕುದುರೆಯನ್ನು ತೆಗೆದುಕೊಂಡು ಹೋಗಿರಿ.' ನಾನು ಕೇಳಿದೆ: 'ಹುಝೂರ್! ಈ ಕುದುರೆಯ ಬೆಲೆ ಎಷ್ಟು?' ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದಕ್ಕೆ ಹುಲ್ಲು–ಕಾಳು ಹಾಕಿರಿ, ಇದರ ಮೇಲೆ ಸವಾರಿ ಮಾಡಿರಿ, ಅದೇ ಇದರ ಬೆಲೆಯಾಗಿದೆ.'

(ಖುತ್ಬದ ಕೊನೆಯಲ್ಲಿ ಹುಝೂರ್ ಹೀಗೆ ಹೇಳಿದರು:) ಯಾವ ನೈತಿಕಗುಣಗಳನ್ನು ಉಂಟುಮಾಡಲಿಕ್ಕಾಗಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದ್ದನೋ ಅಲ್ಲಾಹನು ನಮಗೂ ಆ ನೈತಿಕತೆಯನ್ನು ಬೆಳೆಸಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ.

——————————*****——————————

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ

مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ

فَلَاھَادِیَ لَہٗ ؕ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ

عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی

وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ٥ اُذْکُرُوااللّٰہَ

یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 26-06-2026

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon